4) ಹೊಲ್ತಿಕೋಟೆ ಸಸ್ಯಕ್ಷೇತ್ರ	ಮಾವು, ಹುಣಸೆ ಹಲಸು	23900	215100
5) ಹೊನ್ನಾವರ ಸಸ್ಯಕ್ಷೇತ್ರ	ಮಾವು, ಹುಣಸೆ ಹಲಸು.	6000	54000
	ಒಟ್ಟು	56900	816000

ರಾಜ್ಯದಲ್ಲಿ ಮೀನು ಸಾಕಾಣಿಕೆ

1681 (2380) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ (ಶಿವಮೊಗ್ಗ): ಮಾನ್ಯ ಮೀನುಗಾರಿಕೆ ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಎರಡು ವರ್ಷದಲ್ಲಿ ಮೀನು ಉತ್ಪಾದನಾ ಮರಿಗಳನ್ನು ಸಾಕಲು ಮಾಡಲಾದ ವೆಚ್ಚವೆಷ್ಟು; (ವಿವರಗಳನ್ನು ಒದಗಿಸುವುದು).

ಆ) ಮುಂದಿನ ಸಾಲಿನಲ್ಲಿ ಮೀನುಗಾರಿಕಾ ಅಭಿವೃದ್ಧಿಗಾಗಿ ಯಾವ ಯಾವ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ?

ಶ್ರೀ ಬಿ.ರಮಾನಾಥ ರೈ (ಮೀನುಗಾರಿಕೆ ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು).

ಅ) ಕಳೆದ ಎರಡು ವರ್ಷಗಳಲ್ಲಿ ಮೀನು ಮರಿ ಉತ್ಪಾದನೆಗಾಗಿ ಮಾಡಲಾಗಿರುವ ವೆಚ್ಚವು ಈ ಕೆಳಗಿನಂತಿದೆ;

ಕ್ರ.ಸಂ.	ವಿವರಗಳು	ಭರಿಸಲಾದ ವೆಚ್ಚಗಳು 1998-99 (ಲಕ್ಷಗಳಲ್ಲಿ)	99-2000 (ಲಕ್ಷಗಳಲ್ಲಿ)
1)	ಮೀನು ಮರಿಗಳಿಗೆ:ತಳಿವರ್ಧಕಗಳಿಗೆ ಆಹಾರ.	8.95	5.50
2)	ಕೋಳಿಗೊಬ್ಬರ:ದನದ ಸಗಣಿ ಗೊಬ್ಬರ ಹಿಪ್ಪೆ ಹಿಂಡಿ ಸುಣ್ಣ ಇತ್ಯಾದಿ.	3.70	2.95
3)	ಓವಾಪ್ರೀಮು:ಪಿಟ್ಯೂಟರಿ ಗ್ರಂಥಿಗಳು.	1.25	0.85
4)	ವಿದ್ಯುತ್ಚಕ್ತಿ	2.01	1.75
5)	ಕೊಳಗಳ ನಿರ್ವಹಣಾ ವೆಚ್ಚ	3.00	2.00
6)	ದಿನಗೂಲಿ ನೌಕರರ ಮಜೂರಿ	6.50	8.90
7)	ಇಂಧನ, ಕಛೇರಿ ಸಲಕರಣೆ ಮತ್ತು ಇತರ ವೆಚ್ಚ.	21.30	12.55
	ಒಟ್ಟು ವೆಚ್ಚ	46.71	34.50

ಅ) 2000-2001ನೇ ಸಾಲಿನಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.

ಮೀನು ಮರಿ ಉತ್ಪಾದನೆ, ಪಾಲನೆ ಮತ್ತು ಸಾಗಾಣಿಕೆ, ಜಲಾಶಯ ಮೀನುಗಾರಿಕೆ ಅಭಿವೃದ್ಧಿ ಯೋಜನೆ ಖಾಸಗಿ ವಲಯದಲ್ಲಿ ಮೀನು ಮರಿ ಉತ್ಪಾದನೆಗೆ ಸಹಾಯ, ಸಿಹಿ ನೀರು ಸಿಗಡಿ ಕೃಷಿಗೆ ಸಹಾಯ, ಮೀನು ಕೊಳಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವಿಕೆ, ಮೀನು ಕೊಳಗಳ ನಿರ್ಮಾಣಕ್ಕೆ ಸಹಾಯಧನ, ಹುಲ್ಲುಗೆಂದೆ ಮೀನು ಮರಿಗಳ ಸರಬರಾಜಿಗೆ ಸಹಾಯ, ಅಚ್ಚುಕಟ್ಟು ಪ್ರದೇಶದಲ್ಲಿನ; ಜೌಗು: ಚೌಳು ಪ್ರದೇಶಗಳಲ್ಲಿ ಮೀನು ಸಾಕಾಣಿಕೆಗೆ ಸಹಾಯ, ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ಒಳನಾಡು ಮೀನುಗಾರಿಕೆ ಯೋಜನೆ, ಕೇಂದ್ರ ಪುರಸ್ಕೃತ ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳ ಮೋಟರೀಕರಣ ಯೋಜನೆ, ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು, ಉಪಯೋಗಿಸುವ ಡೀಸಲ್ ಮೇಲಿನ ಕೇಂದ್ರ ಅಬಕಾರಿ ಶುಲ್ಕ ವಿನಾಯಿತಿ, ಮೀನುಗಾರಿಕೆ ಬಂದರುಗಳ ಇಳಿದಾಣ ತಂಗುದಾಣಗಳ ನಿರ್ಮಾಣ ಮತ್ತು ನಿರ್ವಹಣೆ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ನೆರವಿನ ಸಮಗ್ರ ಕರಾವಳಿ ಮೀನುಗಾರಿಕೆ ಅಭಿವೃದ್ಧಿ ಯೋಜನೆ, ದೂರತೀರ ಮೀನುಗಾರಿಕೆ ದೋಣಿಗಳಿಗೆ ಅಳವಡಿಸಲು ವಿದ್ಯುನ್‌ಮಾನ ಉಪಕರಣಗಳನ್ನು ಖರೀದಿಸಲು ಸಹಾಯ, ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ ಮತ್ತು ಸಿಗಡಿ ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಮುಂದುವರಿಕೆ.

ಗಡಿಭಾಗದ ಹಳ್ಳಿಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಅಭಿವೃದ್ಧಿ

1683 (2260) ಶ್ರೀ ಡೊಂಗರರಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಅಥಣಿ ತಾಲ್ಲೂಕಿನ ಗಡಿ ಭಾಗದ ಹಳ್ಳಿಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಅಭಿವೃದ್ಧಿಗಾಗಿ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು)

ಅ) ಅಥಣಿ ತಾಲ್ಲೂಕಿನ ಗಡಿಭಾಗದ ಪ್ರದೇಶಗಳನ್ನೊಳಗೊಂಡ ಗಡಿನಾಡು ಕನ್ನಡಿಗರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ಪ್ರಾಧಿಕಾರ ತಜ್ಞರ ಸಭೆ ನಡೆಸಿದೆ. ಅಲ್ಲಿನ ಕನ್ನಡ ಶಾಲೆಗಳ ಸ್ಥಿತಿಗತಿಗಳನ್ನು ಸುಧಾರಿಸುವ ಬಗ್ಗೆ ಮತ್ತು ಸಾಂಸ್ಕೃತಿಕ ವಾತಾವರಣವನ್ನು ನಿರ್ಮಾಣ ಮಾಡುವ ಬಗ್ಗೆ ಸಂಬಂಧಿಸಿದ ಇಲಾಖೆಗಳೊಡನೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಗಡಿಭಾಗದ ಹಳ್ಳಿಗಳಲ್ಲಿ ಗಡಿ ಉತ್ಸವವನ್ನು ನಡೆಸಲಾಗುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಪರ ಚಟುವಟಿಕೆಗಳನ್ನು ನಡೆಸಲು ಧನಸಹಾಯ ನೀಡಲಾಗುತ್ತದೆ.